# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಪಿಡಬ್ಲ್ಯೂ: 24
ಸಿಡಬ್ಲ್ಯೂ: 45

**<u>ದಿನಾಂಕ: 06-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | : ಕೆ.ಬಿ. ಆಂಜನೇಯ |
| ತಂದೆಯ ಹೆಸರು | : ಬಿ.ಕೆ. ಬಸಣ್ಣ |
| ವಯಸ್ಸು | : 48 ವರ್ಷ |
| ಉದ್ಯೋಗ | : ಮುಖ್ಯ ಪೇದೆ, ಭರಮಸಾಗರ ಪೊಲೀಸ್ ಠಾಣೆ |
| ವಾಸ ಸ್ಥಳ | : ಭರಮಸಾಗರ |

**<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:</u>**

**2019** ನೇ ಇಸವಿಯಿಂದ ನಾನು ಭರಮಸಾಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಸೇವೆ ಸಲ್ಲಿಸುತ್ತಿದ್ದೇನೆ. ದಿನಾಂಕ **29–12–2021** ರಂದು ಮದ್ಯಾಹ್ನ **2.00** ರಿಂದ ರಾತ್ರಿ **9.00** ರವರೆಗೆ ಠಾಣಾ ದಿನಚರಿ ಕರ್ತವ್ಯದಲ್ಲಿರುವಾಗ ಸಂಜೆ **7.00** ಗಂಟೆ ಸಮಯದಲ್ಲಿ ನಾರಪ್ಪ ಬಿನ್ ರಾಜಪ್ಪ, ವಾಸ ಕೋಣನೂರು ಇವರು ಠಾಣೆಗೆ ಹಾಜರಾಗಿ ತಮ್ಮ ಲಿಖಿತ ದೂರನ್ನು ನೀಡಿದ್ದು ಅದನ್ನು ನೋಡುತ್ತಿದ್ದು ಸದರಿ ದೂರನ್ನು ನಿಪಿ–**45** ಎಂದು ನನ್ನ ಸಹಿಯನ್ನು ನಿಪಿ–**45**(ಎ) ಎಂದು ಗುರುತಿಸಲಾಯಿತು. ಅದನ್ನು ನಾನು ನಮ್ಮ ಠಾಣಾ ಸಿಆರ್. ನಂ..**314/21** ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ–**46** ಎಂದು ಗುರುತಿಸಲಾಯಿತು. ಸದರಿ ದೂರನ್ನು ಸುಮಾ ಎಂಬುವವರು ಕಾಣೆಯಾಗಿದ್ದಾರೆ ಎಂಬ ಕಾರಣಕ್ಕಾಗಿ ನಾರಪ್ಪ ನೀಡಿದ್ದು ಆತ ಆಕೆಯ ಗಂಡನಾಗಬೇಕು.

**<u>ಪಾಟೀ ಸವಾಲು: ಶ್ರೀಮತಿ ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿ:</u>**

**2.** ದೂರನ್ನು ದಾಖಲಿಸಿದ ನಂತರ ಅದೇ ದಿನ ನಾನು ಆ ಸ್ಥಳಕ್ಕೆ ಬೇಟಿ ಕೊಟ್ಟಿದ್ದಾಗ್ಯೂ ಅಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ, ಕಾರಣ ಆಗ ರಾತ್ರಿಯಾಗಿತ್ತು. ನಾನು ಅಲ್ಲಿಗೆ ಹೋದಾಗ ರಾತ್ರಿ **8.45** ಗಂಟೆ ಆಗಿತ್ತು. ಸದರಿ ಸ್ಥಳ ಮನೆ ಇರುತ್ತದೆ. ನಾನು ಆ ಮನೆಗೆ ಬೇಟಿ ಕೊಟ್ಟಾಗ ನನಗೆ ಅಲ್ಲಿ ಯಾವುದೇ ಸಂಶಯ ಕಂಡುಬರಲಿಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.